

# ಕೆಥೆಡ್ರಲ್ ಕ್ವಿಲ್ಟ್

*ಈ ವೀಡಿಯೋದಲ್ಲಿ ನಾವು ಕೆಥೆಡ್ರಲ್ ಕ್ವಿಲ್ಟಿನ ಡಿಸೈನನ್ನು ಮಾಡುತ್ತೇವೆ, ಇದು ಸಾಂಪ್ರದಾಯಿಕವಾದ ಕೆಥೆಡ್ರಲ್ ಅಥವಾ ಚರ್ಚಿನ ಕಿಟಕಿಯಿಂದ ಪ್ರೇರೇಪಿತವಾಗಿದೆ.*

**ವಸ್ತುಗಳ ವಿವರ**

ಕೆಥೆಡ್ರೆಲ್ ಕ್ವಿಲ್ಟ್ ಪ್ಯಾಟರ್ನ್ 18ಇಂಚು x 18 ಇಂಚು ಮಾಡಲು ನಿಮಗೆ ಬೇಕಾಗಿರುವ ವಸ್ತುಗಳುಗಳನ್ನು

16 ಪೀಸ್ ಪ್ಲೇನ್ ಬಿಳಿ ಬಣ್ಣದ ಬಟ್ಟೆ ಹಿಂಭಾಗಕ್ಕೆ ಹಾಕಲು 5 x 5 ಇಂಚು ಅಳತೆಯದ್ದು

32 ಪೀಸ್ ಹಳದಿ ಬಟ್ಟೆ ಬೈಂಡಿಂಗಿಗೆ 5 x 5 ಇಂಚು ಅಳತೆಯದ್ದು

4 ಪೀಸ್ ಗುಲಾಬಿ ಬಣ್ಣದ ಸ್ಟ್ರೈಪ್ ಇರುವ ಬಟ್ಟೆ 5 x 5 ಇಂಚು ಅಳತೆಯದ್ದು

4 ಪೀಸ್ ನೀಲಿ ಬಣ್ಣದ ಸ್ಟ್ರೈಪ್ ಇರುವ ಬಟ್ಟೆ 5 x 5 ಇಂಚು ಅಳತೆಯದ್ದು

1 ಪೀಸ್ ಹಸಿರು ಬಣ್ಣದ ಸ್ಟ್ರೈಪ್ ಇರುವ ಬಟ್ಟೆ 5 x 5 ಇಂಚು ಅಳತೆಯದ್ದು

ಕಟ್ಟಿಂಗ್ ಮ್ಯಾಟ್

ಕ್ವಿಲ್ಟಿಂಗ್ ರೂಲರ್

ರೋಟರಿ ಫ್ಯಾಬ್ರಿಕ್ ಕಟರ್

ದಾರ


ಐರನ್

ಬೀಡೆಡ್ ಪಿನ್

ಮತ್ತು ಕತ್ತರಿ



ಪ್ರಾರಂಭಿಸಲು ನಾವು ನಿಮಗೆ 5ಇಂಚು x 5 ಇಂಚು ಬಟ್ಟೆಯನ್ನು ಹೇಗೆ ಚೌಕಾಕಾರವಾಗಿ ಮಾಡೋದು ಎಂಬುದರ ಬಗ್ಗೆ ನಾವು ನಿಮಗೆ ಹೇಳಿ ಕೊಡುತ್ತೇವೆ. ಎರಡು ಪದರದ ಹಳದಿಬಟ್ಟೆಯನ್ನು ಇಲ್ಲಿ ತೋರಿಸಿರುವಂತೆ ತೆಗೆದುಕೊಳ್ಳಿ, ಇದು ಕ್ವಿಲ್ಟಿಂಗ್ ರೂಲರ್. ರೂಲರ್ನಲ್ಲಿರುವ ಒಂದೊಂದು ಬಾಕ್ಸ್ 1ಇಂಚು x 1 ಇಂಚು ಇರುತ್ತದೆ. 5 ಬಾಕ್ಸ್ ಗಳನ್ನು ಉದ್ದವಾಗಿ ಮತ್ತು ಅಗಲವಾಗಿ ಅಳತೆ ಮಾಡಿ. ರೋಟರಿ ಫ್ಯಾಬ್ರಿಕ್ ಕಟರ್ ಸಹಾಯದಿಂದ ರೂಲರ್ ನ ಸುತ್ತಲೂ ಕಟ್ ಮಾಡಿ ಹೆಚ್ಚಾಗಿರುವ ಬಟ್ಟೆಯನ್ನು ಕಟ್ ಮಾಡಿ.ಅಷ್ಟೇ ನಿಮ್ಮ ಹತ್ರ ಈಗ 5” x 5” ಅಳತೆಯ ಚೌಕಾಕಾರದ ಬಟ್ಟೆ ತಯಾರಾಗಿದೆ. ಈಗ ಹೊಲೆಯೋಣ.

ಈಗಾಗಲೇ ಕತ್ತರಿಸಿರುವ ಪ್ರಿಂಟೆಡ್ ಬಟ್ಟೆಯನ್ನು ತೆಗೆದುಕೊಂಡು ಅರ್ಧಕ್ಕೆ ಮಡಚಬೇಕು ವೀಡಿಯೋದಲ್ಲಿ ತಿಸಿರುವಂತೆ ಡಯಾಗ್ನಲಾಗಿ ತ್ರಿಕೋಣಾಕಾರವಾಗಿ ಮಡಚಬೇಕು. ಮತ್ತು ಮಡಚಿರುವ ಭಾಗದಲ್ಲಿ ಐರನ್ ಮಾಡಿ ಐರನ್ ಮಾಡುವುದು ಕ್ವಿಲ್ಟಿಂಗ ಬಹಳ ಮುಖ್ಯವಾದ ಘಟ್ಟ,ಸ್ತೂತ್ರಾದ ಮತ್ತು ಬೇಕಾಗಿರುವ ಫಲಿತಾಂಶವನ್ನು ಪಡೆಯಲು ಎಲ್ಲಾ ಮಡಕೆ ಮತ್ತು ಸೀಮನ್ನು ಐರನ್ ಮಾಡಬೇಕು. ಇದೇ ವಿಧಾನವನ್ನು ಎಲ್ಲಾ ಬಟ್ಟೆಯ ಪೀಸಿಗೆ ಪುನರಾವರ್ತಿಸಬೇಕು. ಬಿಳಿ ಬಣ್ಣದ ಬಟ್ಟೆಯನ್ನು ಹಿಂಭಾಗದಲ್ಲಿ ಹೊಲೆಯಬೇಕು.ವೀಡಿಯೋದಲ್ಲಿ ತೋರಿಸಿರುವಂತೆ ಎರಡು ತ್ರಿಕೋಣಾಕಾರದ ಪ್ರಿಂಟಿರುವ ಪೀಸನ್ನು ಬಿಳಿ ಬಣ್ಣದ ಬಟ್ಟೆ ಮೇಲಿಡಬೇಕು ಬಟ್ಟೆಯ ಮಡಚಿರುವಭಾಗ ವೀಡಿಯೋದಲ್ಲಿ ತೋರಿಸಿರುವ ಹಾಗೆ ಮಧ್ಯದಲ್ಲಿರಬೇಕು.ಚೌಕಾಕಾರದ ಬಟ್ಟೆಯ ಸುತ್ತಲೂ ಹೊಲೆಯಬೇಕು. ಬಟ್ಟೆಯನ್ನು ಸರಿಯಾದ ಜಾಗದಲ್ಲಿಟ್ಟು ಪಿನ್ ಮಾಡಿ ಹೊಲೆಯಲು ಪ್ರಾರಂಭಿಸೋಣ.







ಬಟ್ಟೆಯನ್ನು ನಿಮ್ಮ ಊಷಾ ಜನೋಮ್ ಮೆಮೋರಿ ಕ್ರಾಫ್ಟ್ ಕ್ವಿಲ್ಟಿಂಗ್ ಮಷೀನಿನ ಹತ್ತಿರ ತೆಗೆದುಕೊಂಡು ಹೋಗಿ. ನಾವೀಗಾಗಲೆ ಮಷೀನನ್ನು ಹೆಚ್ ಪಿ ಫುಟ್ ಮತ್ತು ಹೆಚ್ ಪಿ ಪ್ಲೇಟ್ ಹಾಕಿ ತಯಾರಾಗಿಟ್ಟಿದ್ದೇವೆ. ಮಷೀನನ್ನು ನೇರ ಹೊಲಿಗೆಗೆ ಇಟ್ಟು ಚೌಕಾಕಾರದ ಸುತ್ತಲೂ ಹೊಲೆಯಲು ಪ್ರಾರಂಭಿಸೋಣ. ಒಂದು ಕಡೆಯ ಅಂತ್ಯಕ್ಕೆ ಬಂದಾಗ ನಿಲ್ಲಿಸಿ ಸೂಜಿಯನ್ನು ಮೇಲಕ್ಕೆತ್ತಿ ಬಟ್ಟೆಯನ್ನು ತಿರುಗಿಸಿ ಹೊಲೆಯುತ್ತಾ ಹೋಗಿ. ಪೂರ್ತಿ ಚೌಕದಲ್ಲಿ ಇದೇ ರೀತಿ ಮಾಡಬೇಕು.ಒಳ್ಳೆಯ ಕೆಲಸ!






ಕ್ವಿಲ್ಟಿನ ಒಂದು ಭಾಗವನ್ನು ಮುಗಿಸಿದ್ದೇವೆ. ಇದು ಹೀಗೆ ಕಾಣಬೇಕು. ಇನ್ನೂ ಮೂರು ಚೌಕವನ್ನು ಹೀಗೆ ಹೊಲೆಯಿರಿ. ಅದನ್ನು ಕಟ್ಟಿಂಗ್ ಮ್ಯಾಟ್ ಮೇಲೆ ವೀಡಿಯೋದಲ್ಲಿ ತೋರಿಸಿದಂತೆ ಇಡಬೇಕು. ಈಗ ಗಮನಿಸಿ ಹೇಗೆ ಒಂದು ಚೌಕದ ಮಧ್ಯದ ಗೆರೆ ಇನ್ನೊಂದು ಚೌಕದ ಗೆರೆಯ ಮಧ್ಯಭಾಗಕ್ಕೆ ಸೇರಿಕೊಂಡು ಹೊಸ ಆಕೃತಿಯನ್ನು ಸೃಷ್ಟಿಸಿದೆ.







ಒಂದು ಚೌಕವನ್ನು ಇನ್ನೊಂದರ ಮೇಲೆ ಮುಂಭಾಗ ಮುಂಭಾಗವನ್ನು ನೋಡುವಂತೆ ಇಡಬೇಕು, ಮತ್ತು ವಿಡಿಯೋದಲ್ಲಿ ತೋರಿಸಿರುವಂತೆ ನೀವು ಹೊಲೆಯುವ ಭಾಗವನ್ನು ಪಿನ್ ಮಾಡಬೇಕು. ನಾವು ಈ ಭಾಗವನ್ನು ಹೊಲೆಯಬೇಕು. ಪಿನ್ ಹಾಕಿರುವ ಭಾಗದಲ್ಲಿ ಹೊಲೆಯಬೇಕು. ದಾರವನ್ನು ಕತ್ತರಿಸಿ. ಇನ್ನೆರಡು ಚೌಕಕ್ಕೂ ಇದೆ ವಿಧಾನವನ್ನು ಅನುಸರಿಸಿ.








ಈಗ ನಮ್ಮ ಹತ್ತಿರ ಎರಡು ಚೌಕದ ಎರಡು ಬೇರೆ ಬೇರೆ ಪೀಸ್ಗಳಿವೆ. ಈಗ ನಾವು ಇವೆರಡನ್ನು ಒಟ್ಟಿಗೆ ಹೊಲೆಯೋಣ. ಡಿಸೈನನ್ನು ನಿಮ್ಮ ಮನದಲ್ಲಿ ಇತ್ತುಕೊಂಡಿರಿ. ಈಗ ಎರಡೂ ಪೀಸ್ಗಳನ್ನು ಮುಂಭಾಗ ಮುಂಭಾಗವನ್ನು ನೋಡುವಂತೆ ಇಟ್ಟು ಹೊಲೆಯಬೇಕು. ದಾರವನ್ನು ಕತ್ತರಿಸಿ. ನಮ್ಮ ಪ್ಯಾಟರ್ನ್ ನೋಡಲು ಹೀಗೆ ಕಾಣಬೇಕು. ಈಗ ನಾವು ಸೀಮ್ಸನ್ನು ಬೆರಳಿನ ಸಹಾಯದಿಂದ ತೆಗೆದು ಸೀಮ್ ಲೈನನ್ನು ಐರನ್ ಮಾಡಬೇಕು.ಇದು ಬಟ್ಟೆಯನ್ನು ಚಪಟ್ಟೆಯಾಗಿಸುತ್ತದೆ. ಇದು ಸರಿಯಾದ ಫಿನಿಷ್ ಗೆ ತುಂಬಾ ಮುಖ್ಯವಾದದ್ದು.

ಹೊಲೆದಿರುವ ಪ್ಯಾಟರ್ನ್ ಹೀಗೆ ಕಾಣಬೇಕು. ಮೊದಲ ಸಾಲಿನ ಚೌಕದಂತೆ ನಾವು ಇನ್ನೊಂದು ಚೌಕವನ್ನು ಮಾಡಿದ್ದೇವೆ. ಈ ಚೌಕವನ್ನು ಹೇಗೆ ಜೋಡಿಸಬೇಕೆಂದರೆ ಎರಡು ವಿರುದ್ಧ ದಿಕ್ಕಿನ ಚೌಕ ಇಲ್ಲಿ ತೋರಿಸಿರುವಮ್ತೆ ಇರಬೇಕು. ಈಗ ನಾವು ಮೇಲಿನ ಮತ್ತು ಕೆಳಗಿನ ಚೌಕವನ್ನು ಜೋಡಿಸೋಣ. ವೀಡಿಯೋದಲ್ಲಿ ತೋರಿಸಿರುವಂತೆ ಮುಂಭಾಗ ಮುಂಭಾಗವನ್ನು ನೋಡುವಂತಿರಬೇಕು ಮತ್ತು ಸೀಮ್ ಲೈನ್ಸ್ ಒಂದಕ್ಕೊಂದು ಹೋಲುವಂತಿರಬೇಕು. ಬಟ್ಟೆಯನ್ನು ಜೊತೆಯಾಗಿ ಪಿನ್ ಮಾಡಿ.



ಹಿಂದೆ ಮಾಡಿದಂತೆ ಎರಡನ್ನೂ ಒಟ್ಟಿಗ ಹೊಲೆಯಿರಿ.







ಈಗ ನಮ್ಮ ಹತ್ತಿರ ೮ ಚೌಕ ತಯಾರಾಗಿದೆ. ನಾವು ಇನ್ನು ೮ ಚೌಕವನ್ನು ತೆಗೆದುಕೊಂಡು,ಒಟ್ಟಿಗೆ ಜೋಡಿಸಿ ಹಿಂಬದಿಯ ಭಾಗವನ್ನು ವೀಡಿಯೋದಲ್ಲಿ ತೋರಿಸಿದಂತೆ ಕೆಥೆಡ್ರಲ್ ಕ್ವಿಲ್ಟನ್ನು ಹೊಲೆಯೋಣ.

ಇದಾದ ನಂತರ ಹೊಲೆದಿರುವ ಬಟ್ಟೆಯನ್ನು ಕಟ್ಟಿಂಗ್ ಮ್ಯಾಟ್ ಮೇಲೆ ಇಡಬೇಕು.ನಾವೀಗ ಬಣ್ಣದ ಸ್ಟ್ರಿಪ್ಸ್ ಚೌಕಗಳನ್ನು ತೆಗೆದುಕೊಂಡು ಹೊಲೆದಿರುವ ಬಟ್ಟೆಯ ಚೌಕದ ಒಳಗೆ ಇಡಬೇಕು.





ನಾವೀಗ ಎರಡೂ ಕಡೆ, ಮೇಲ್ಭಾಗ ಮತ್ತು ಕೆಳಭಾಗದ ಗ್ಯಾಪನ್ನು ತುಂಬಬೇಕು.ಉಳಿದಿರುವ ಸ್ಟ್ರೈಪ್ಸ್ ಚೌಕದ ಎರಡು ಪೀಸನ್ನು ತೆಗೆದುಕೊಂಡು ಕ್ವಿಲ್ಟಿಂಗ್ ರೂಲರ್ ಮತ್ತು ರೋಟರಿ ಕಟ್ಟರ್ ಸಹಾಯದಿಂದ ಚೌಕವನ್ನು ಎರಡು ಭಾಗವಾಗಿ ಡಯಾಗ್ನಲಾಗಿ ಕತ್ತರಿಸಿ. ತ್ರಿಕೋನಾಕಾರವನ್ನು ಎರಡೂ ಕಡೆ, ಮೇಲ್ಭಾಗ ಮತ್ತು ಕೆಳಭಾಗದ ಮೇಲೆ ಇಲ್ಲಿ ತೋರಿಸಿರುವಂತೆ ಇಡಬೇಕು.

ತುದಿಗಳಿಗೆ ನಮಗೆ ಇನ್ನೂ ಸಣ್ಣ ತ್ರಿಕೋನಗಳು ಬೇಕಾಗುತ್ತದೆ. ಚೌಕದ ಬಟ್ಟೆಯನ್ನು ತೆಗೆದುಕೊಂಡು ಅದನ್ನು ಇಲ್ಲಿ ತೋರಿಸಿರುವಂತೆ ಎರಡು ಬಾರಿ ಕತ್ತರಿಸಿ. ಈ ಸಣ್ಣ ತ್ರಿಕೋನಾಕಾರವನ್ನು ತುದಿಗಳಿಗ ಇಟ್ಟು ಪಿನ್ ಮಾಡಿ.

ಈಗ ಸಲ್ಪ ಜಾದು ಮಾಡುವ ಸಮಯ. ಪ್ರಿಂಟೆಡ್ ಹಳದಿ ಹಿಂಭಾಗದ ಬಟ್ಟೆಯನ್ನು ಸ್ಟ್ರೈಪ್ಡ್ ಬಟ್ಟೆಯ ಮೇಲಿಡಿ. ನೋಡಿ ಹೇಗೆ ಚೌಕಾಕಾರವು ಹೇಗೆ ಚೆಂದದ ವೃತ್ತಾಕಾರವಾಗಿದೆ. ಇದು ಕೆಥೆಡ್ರೆಲ್ ಪ್ಯಾಟರ್ನ್ಗೆ ಕೀಲಿ ಕೈ ಇದ್ದಹಾಗೆ. ನಾವು ಪಾಯಿಂಟೆಡ್ ಎರಿಯಾವನ್ನು ಹೊಲೆಯಬೇಕು ಮತ್ತು ಅದನ್ನು ಎಲ್ಲಾ ನಾಲ್ಕು ಕಡೆ ಪುನರಾವರ್ತಿಸಬೇಕು ಹಾಗು ಇಡೀ ಕ್ವಿಲ್ಟಿಗೆ ಹೊಲೆಯಬೇಕು.

ಮಡಚಿರುವ ಬಟ್ಟೆಯನ್ನು ಪ್ರೆಸ್ಸರ್ ಫುಟ್ಟಿನ ಕೆಳಗೆ ಇಟ್ಟು ಹೊಲೆಯಲು ಪ್ರಾರಂಭಿಸಿ. ನಿಧಾನವಾಗಿ ಹೊಲೆಯುತ್ತಾ ವೃತ್ತವನ್ನು ಹೊಂದಿಸಿಕೊಳ್ಳುತ್ತಾ ಕೈಗಳನ್ನು ಭದ್ರವಾಗಿರಿಸಿಕೊಂಡು ಹೊಲೆಯಿರಿ. ತುದಿಗಳನ್ನು ತಲುಪಿದಾಗ ಎರಡೂ ಬದಿಯಲ್ಲಿ ಚೌಕದ ಮೇಲೆ ಪಾಯಿಂಟೆಡ್ ಎಡ್ಜ್ ಮಾಡಲು ಓವರ್ಲ್ಯಾಪ್ ಮಾಡಿ ವೀಡಿಯೋದಲ್ಲಿ ತೋರಿಸಿರುವಂತೆ ಹೊಲೆಯಿರಿ. ಒಮ್ಮೆ ಅಂಚಿನ ತುದಿಯನ್ನು ತಲುಪಿದಾಗ ಬಟ್ಟೆಯನ್ನು ಸೂಜಿ ಇರುವಾಗಲೇ ಪಿವಟ್ ಮಾಡಿ.

ಮುಂದುವರಿದು ಚೌಕದ ಎಲ್ಲಾ ಸೈಡನ್ನು ಹೊಲೆಯಿರಿ. ಇದೇ ವಿಧಾನವನ್ನು ಕ್ವಿಲ್ಟಿನ ಎಲ್ಲಾ ಚೌಕದಲ್ಲೂ ಹೊಲೆಯಿರಿ. ಡಿಸೈನನ್ನು ಪೂರ್ಣಗೊಳಿಸಲು ನಾವು ಕ್ವಿಲ್ಟಿನ ಸುತ್ತಲಿನ ಎಲ್ಲಾ ಎಡ್ಜನಲ್ಲೂ ನೇರ ಹೊಲಿಗೆಯನ್ನು ಹಾಕೋಣ. ಹೊಲೆದ ನಂತರ ದಾರವನ್ನು ಕತ್ತರಿಸಿ.

ಅಷ್ಟೇ ನಿಮ್ಮ ಟೋಪಿಗೆ ಇನ್ನೊಂದು ಗರಿಯನ್ನು ಸೇರಿಸಿದ್ದೀರಿ. ಕೆಥೆಡ್ರಲ್ ಕ್ವಿಲ್ಟಿಂಗ್ ಟೆಕ್ನಿಕ್ ನಿಂದ ನೀವೀಗ ವಿವಿಧ ಬಗೆಯ ಸುಂದರವಾದ ಕ್ವಿಲ್ಟನ್ನು ತಯಾರಿಸಬಹುದು. ಇದನ್ನು ನಿಮ್ಮ ಕೋಣೆಯ ಗೋಡೆಗಳನ್ನು ಸಿಂಗರಿಸಲೂ ಕೂಡ ಬಳಸಬಹುದು. ಬ್ಯಾಗ್ ಮತ್ತು ಕ್ಲಚಸ್ ನಲ್ಲೂ ಉಪಯೋಗಿಸಬಹುದು. ನಿಮಗೆ ಈ ವೀಡಿಯೋ ಇಷ್ಟವಾಗಿದೆ ಎಂದು ನಂಬಿದ್ದೇವೆ.